
**ಒಂದು ದಿನ ನಾಗಮ್ಮ ಶಿವಪೂಜೆಯಲ್ಲಿದ್ದಾಗ ದೀಪದ ಎಣ್ಣೆ ತೀರಿದ್ದರಿಂದ ನದಿಯ ನೀರನ್ನೇ ಹಾಕಿ ದೀಪ ಬೆಳಗಿಸಿದ್ದರಂತೆ. ಇದರಿಂದಾಗಿ ಆ ಹೊಳೆಗೆ ಎಣ್ಣೆ ಹೊಳೆ ಎಂದು ಹೆಸರಾಯಿತು.**



## ಎಣ್ಣೆಹೊಳೆ ನಂದಾದೀಪ

# ಅಕ್ಕ ನಾಗಮ್ಮ

**ಚಿ**ಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ಕೇಂದ್ರದಿಂದ ನೈಋತ್ಯ ದಿಕ್ಕಿಗೆ ಸಾಗಿದರೆ ಒಂದು ಕಿಲೋಮೀಟರ್ ಅಂತರದಲ್ಲಿ ತೋಟ ಕಾಣುತ್ತದೆ. ಅಲ್ಲಿಯೇ ಬಸವಣ್ಣನವರ ಸಹೋದರಿ ಅಕ್ಕನಾಗಮ್ಮನವರ ಲಿಂಗೈಕ್ಯ ಗದ್ದುಗೆ ಮಂಟಪ ಇರುವುದು.

ಬಸವಣ್ಣನವರ ವಿದ್ಯಾಭ್ಯಾಸಕ್ಕೆ ಸಕಲ ಸಿದ್ಧತೆಯನ್ನು ಮಾಡಿಕೊಟ್ಟು, ಅವರ ವ್ಯಕ್ತಿತ್ವವನ್ನು ರೂಪಿಸುವಲ್ಲಿ ದುಡಿದ ಅಕ್ಕನಾಗಮ್ಮನದು ತ್ಯಾಗ ಜೀವನ. ಬಸವೇಶ್ವರರನ್ನು ಹೊತ್ತು, ಬೆಳೆಸಿ, ವೇದ, ಆಗಮ, ಶಾಸ್ತ್ರ, ಶೃತಿ, ಪುರಾಣ, ಇತಿಹಾಸಗಳ ಪರಿಚಯಕ್ಕೆ ಅನುವು ಮಾಡಿಕೊಟ್ಟು, ವೀರಶೈವ ಜ್ಯೋತಿಯನ್ನಾಗಿ ರೂಪಿಸಿದ ಕೀರ್ತಿ ಇವರದು. ಇತ್ತೀಚೆಗೆ ಇವರ ಜಯಂತ್ಯುತ್ಸವ ಆಚರಿಸಲಾಯಿತು.

ಬಿಜಾಪುರ ಜಿಲ್ಲೆ ಬಾಗೇವಾಡಿಯಲ್ಲಿ ಮಾದರಸ, ಮಾದಲಾಂಬಿಕೆಯರ ಮಗಳಾಗಿ ಮನೆ ಬೆಳಗಿದವರು ಅಕ್ಕ ನಾಗಮ್ಮ. ಇವರು ಜನಿಸಿದ್ದು, ಕ್ರಿ.ಶ. 1116ರ ಶ್ರಾವಣ ಶುದ್ಧ ಪಂಚಮಿಯಂದು (ನಾಗರಪಂಚಮಿ). ಉಪನಯನದ ಸಂದರ್ಭದಲ್ಲಿ ಬಸವಣ್ಣನವರೊಂದಿಗೆ ಅಕ್ಕ ನಾಗಮ್ಮನೂ ಮನೆ ತೊರೆದು ಹೊರಟ ಪ್ರಸಂಗ ಇವರ ಬದುಕಿನ ಮಹತ್ವದ ತಿರುವುಗಳಲ್ಲಿ ಒಂದು.

ನಂತರ ಇವರೊಂದಿಗೆ ತಾಯಿ ನಾಗಲಾಂಬಿಕೆಯೂ ಮಗ ಬಸವಣ್ಣನನ್ನು ನೆರಳಿನಂತೆ ಹಿಂಬಾಲಿಸಿಕೊಂಡು ಕಲ್ಯಾಣದಲ್ಲಿದ್ದ ಬಸವಣ್ಣನವರ ಮಹಾಮನೆಯನ್ನು ಸೇರಿದರು.

***

ಕಲ್ಯಾಣ ಕ್ರಾಂತಿಯ ನಂತರ ಶಿವಶರಣರೆಲ್ಲ ತಾಳೆಗರಿಗಳಲ್ಲಿ ರಚಿಸಿದ ವಚನದ ಕಟ್ಟುಗಳನ್ನು ಬೆನ್ನಿಗೆ ಕಟ್ಟಿಕೊಂಡು ಕಲ್ಯಾಣ ತೊರೆದು ಉಳವಿ (ಉತ್ತರ ಕನ್ನಡ ಜಿಲ್ಲೆ) ಯತ್ತ ಹೊರಟರು. ಕೆಲಕಾಲ ಅಲ್ಲಿಯ ದುರ್ಗಮ ಕಾಡು, ಗವಿಗಳಲ್ಲಿ ತಂಗಿದರು. ನಂತರ ತಂಡಗಳನ್ನು ರಚಿಸಿಕೊಂಡು ಶರಣ ತತ್ವ ಪ್ರಚಾರಕ್ಕಾಗಿ ದಿಕ್ಕು ದಿಕ್ಕಿಗೂ ತೆರಳಿದರು. ಅಕ್ಕ ನಾಗಮ್ಮ, ನುಲಿಯ ಚಂದಯ್ಯ, ಗುರುಗಳಾದ ಸಿದ್ಧವೀರಣ್ಣೊಡೆಯರೊಂದಿಗೆ ನೂರಾರು ಶರಣರು ಹುಬ್ಬಳ್ಳಿ, ಹಾವೇರಿ, ಹರಿಹರ, ಶಿವಮೊಗ್ಗ, ಭದ್ರಾವತಿ ಮಾರ್ಗವಾಗಿ ತರೀಕೆರೆಯ ಒಂದು ಹೊಳೆಯ ಸಮೀಪ ಬರುವ ಹೊತ್ತಿಗೆ ನಾಗಮ್ಮನ ಆರೋಗ್ಯ ಹದಗೆಟ್ಟಿತು. ಆಗ ಅವರು ಅಲ್ಲಿಯೇ ತಂಗಬೇಕಾಯಿತು. ಕೆಲ ಕಾಲದ ನಂತರ ನಾಗಮ್ಮ ಲಿಂಗೈಕ್ಯರಾದರು. ಆ ಹೊಳೆಯನ್ನು ಜನ ಎಣ್ಣೆಹೊಳೆ ಎಂದು ಕರೆದರು. ಹೀಗೆ ಕರೆಯಲು ಕಾರಣ– ಒಂದು ದಿನ ನಾಗಮ್ಮ ಶಿವಪೂಜೆಯಲ್ಲಿದ್ದಾಗ ದೀಪದ ಎಣ್ಣೆ ತೀರಿದ್ದರಿಂದ ನದಿಯ ನೀರನ್ನೇ ಹಾಕಿ ದೀಪ ಬೆಳಗಿಸಿದ್ದರಂತೆ. ಇದರಿಂದಾಗಿ ಆ ಹೊಳೆ ಇಂದಿನ ವರೆಗೂ ಜನರ ಬಾಯಲ್ಲಿ ಎಣ್ಣೆಹೊಳೆಯಾಗಿಯೇ ಇದೆ.

ನಾಗಮ್ಮ ಲಿಂಗೈಕ್ಯರಾದ ನಂತರ ಶರಣ ತತ್ವ ಪ್ರಚಾರ ಕಾರ್ಯವನ್ನು ನುಲಿಯ ಚಂದಯ್ಯ ಮುಂತಾದವರು ಮೈಸೂರು ರಾಜ್ಯದತ್ತ ಮುನ್ನಡೆಸಿಕೊಂಡು ಸಾಗಿದರು.

***

ಈಗಲೂ ತರೀಕೆರೆ ಪಟ್ಟಣದ ಹತ್ತಿರದ ತೋಟದಲ್ಲಿ ನಾಗಮ್ಮನ ಗದ್ದುಗೆ ನೋಡಬಹುದು. ಇದುವರೆಗೂ ಗದ್ದುಗೆಗೆ ತೆರಳಲು ದಾರಿಯೇ ಇರಲಿಲ್ಲ. ಇದೀಗ ಸ್ಥಳೀಯ ಅಧಿಕಾರಿಗಳು, ಭಕ್ತರು, ಜನ ಪ್ರತಿನಿಧಿಗಳ ಬೆಂಬಲದಿಂದ ಗದ್ದುಗೆಯ ದಾರಿ ಮುಕ್ತಾಯ ಹಂತ ಕಂಡಿದೆ.

ವಿಪರ್ಯಾಸವೆಂದರೆ ಈ ಗದ್ದುಗೆಯ ಸುತ್ತ ಮುತ್ತ ಸ್ಥಳೀಯರು ತಮ್ಮ ಜಮೀನುಗಳಲ್ಲಿ ಹಿರಿಯರ ಶವ ಸಂಸ್ಕಾರ ಮಾಡಿ ಗದ್ದುಗೆ ನಿರ್ಮಿಸಿದ್ದಾರೆ. ಮುಂದೊಂದು ದಿನ ಈ ಸಮಾಧಿಗಳೊಳಗೆ ನಾಗಮ್ಮನ ಸಮಾಧಿಯನ್ನೂ ಹುಡುಕಬೇಕಾದ ಸಂದರ್ಭ ಬರಬಹುದೇನೋ. ಈ ಹಿಂದೆ ಮುಖ್ಯಮಂತ್ರಿಗಳು ಈ ಕ್ಷೇತ್ರದ ಅಭಿವೃದ್ಧಿಗಾಗಿ ಹಣ ಮಂಜೂರು ಮಾಡಿದ್ದರಾದರೂ ಇದುವರೆಗೆ ಯಾವ ಅಭಿವೃದ್ಧಿಯೂ ಆಗಿಲ್ಲ.

ನಾಗಮ್ಮನ ಗದ್ದುಗೆಯಿಂದ 8 ಕಿ.ಮೀ. ದೂರದಲ್ಲಿ ನಂದಿ ಗ್ರಾಮವಿದ್ದು, ಇಲ್ಲಿ ನುಲಿಯ ಚಂದಯ್ಯನವರ ಐಕ್ಯ ಗದ್ದುಗೆಯೂ ಇದೆ. ಇತ್ತ ಕಡೆ ಬಂದಲ್ಲಿ ಮಹಾಶರಣರು ನಡೆದಾಡಿದ, ತತ್ವ ಸಾರಿದ ಭೂಮಿಯಲ್ಲಿ ಹೆಜ್ಜೆ ಹಾಕುತ್ತ, ಗದ್ದುಗೆ ದರ್ಶನ ಪಡೆಯಬಹುದು. ಉಳಿದುಕೊಳ್ಳಲು ತರೀಕೆರೆ ತಾಲ್ಲೂಕು ಕೇಂದ್ರದ ಕುಂಬಾರ ಬೀದಿಯಲ್ಲಿ ಎಣ್ಣೆಹೊಳೆಮಠವಿದೆ.

■ ಚಿತ್ರ ಲೇಖನ : ಬುರುಡೇಕಟ್ಟೆ ಮಂಜಪ್ಪ



ಅಕ್ಕ ನಾಗಮ್ಮನ ಗದ್ದುಗೆ

